# ಕುವೆಂಪು ವಿಶ್ವವಿದ್ಯಾಲಯ

## *ಸಿಂಡಿಕೇಟ್ ಸಾಮಾನ್ಯ ಸಭೆಯ*
## ನಡಾವಳಿಗಳು

## ಸಭಾ ದಿನಾಂಕ : 09–12–2022

**ಪ್ರಾಧಿಕಾರಗಳ ವಿಭಾಗ**

**ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451**
**ಶಿವಮೊಗ್ಗ ಜಿಲ್ಲೆ.**

Scanned with OKEN Scanner

ಫ್ಯಾಕ್ಸ್: 08282–256262
ಇ-ಮೇಲ್:drsyndicateku@gmail.com

☎ 08282–256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1-ಸಿಂ-09: 505 :2022–23 ದಿನಾಂಕ:07–02–2023
23

ಮಾನ್ಯರೆ,

ವಿಷಯ: ದಿನಾಂಕ:09-12-2022ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು– ಅಧ್ಯಾಯ-III ರ ಪ್ರಕರಣ– 16 ರನ್ವಯ ದಿನಾಂಕ:09-12-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ-IIIರ ಪ್ರಕರಣ – 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

PROCEEDINGS COVE LETTER-23-06-20222

Scanned with OKEN Scanner

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:09–12–2022 ರಂದು ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಾಮಾನ್ಯ ಸಿಂಡಿಕೇಟ್ ಸಭೆ "ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಆಯ್ಕೆ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್, ಸಿ., ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 10. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 11. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 12. | ಪ್ರೊ. ರಿಯಾಜ್ ಮಹಮೂದ್, ಡೀನರು. ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 13. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು, | ಸದಸ್ಯರು |
| 14. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 16. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮುಂದುವರೆದು ಇದು ವಿಶೇಷವಾದ ಸಿಂಡಿಕೇಟ್ ಸಭೆಯಾಗಿದೆ. ಸರ್ಕಾರದಿಂದ ನಾಮನಿರ್ದೇಶನಗೊಂಡ ಸಿಂಡಿಕೇಟ್ ಸದಸ್ಯರಾದ ಶ್ರೀ ಹೆಚ್. ಬಿ. ರಮೇಶಬಾಬು, ಶ್ರೀ ಬಳ್ಳೇಕೆರೆ ಸಂತೋಷ್, ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ, ಶ್ರೀ ಧರ್ಮಪ್ರಸಾದ್ ಜಿ., ಶ್ರೀ ರಾಮಲಿಂಗಪ್ಪ ಹೆಚ್., ಶ್ರೀ ಎಸ್. ಆರ್. ನಾಗರಾಜ್ ರವರು ಹಾಗೂ ಪ್ರಾಂಶುಪಾಲರ ಜೇಷ್ಠತೆಯನುಸಾರ ಮಾನ್ಯ ಕುಲಪತಿಗಳಿಂದ ನಾಮ ನಿರ್ದೇಶಿಸಲ್ಪಟ್ಟ, ಶ್ರೀಮತಿ ಭಾರತಿ, ಪ್ರಾಂಶುಪಾಲರು ಶ್ರೀ ನಟೇಶ್ ಎಸ್. ಎಂ. ಪ್ರಾಂಶುಪಾಲರು, ಡಾ. ಧನಂಜಯ ಬಿ.ಜಿ. ಪ್ರಾಂಶುಪಾಲರು ಸರ್ಕಾರಿ ಕಾಲೇಜು, ಭದ್ರಾವತಿ ಮತ್ತು ಶ್ರೀ ಬಿ.ಸಿ. ಬಸವರಾಜಪ್ಪ, ಪ್ರಾಂಶುಪಾಲರು ಇವರುಗಳು ಸಹ ತಮ್ಮ ಸದಸ್ಯತ್ವದ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಇವರ ಸಹಕಾರವನ್ನು



Scanned with OKEN Scanner

ಸ್ಮರಿಸಿ ಅಭಿನಂದಿಸಿದರು. ಮಾನ್ಯ ಕುಲಪತಿಗಳನ್ನು ಈ ದಿನದ ಸಭೆಯನ್ನು ಪ್ರಾರಂಭಿಸಲು ಕೋರಿದರು. ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ಸಭೆಯಲ್ಲಿ ಭಾಗವಹಿಸಿದ ಎಲ್ಲ ಸದಸ್ಯರಿಗೆ ಮತ್ತೊಮ್ಮೆ ಆತ್ಮೀಯ ಸ್ವಾಗತ ಕೋರಿದರು. ಹಾಗೂ ಅವಧಿ ಪೂರ್ಣಗೊಳಿಸಿ ನಿರ್ಗಮಿಸುತ್ತಿರುವ ಎಲ್ಲ ಸದಸ್ಯರಿಗೆ ಅವರ ಕೊಡುಗೆಗಳನ್ನು ಸ್ಮರಿಸಿ ಅಭಿನಂದನೆಗಳನ್ನು ತಿಳಿಸಿದರು. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು ಕೂಡ ಅವಧಿ ಪೂರ್ಣಗೊಳಿಸಿ ನಿರ್ಗಮಿಸುತ್ತಿರುವ ಸದಸ್ಯರನ್ನು ಆಹ್ವಾನಿಸಿ ಅವರ ಸೇವೆಯನ್ನು ಸ್ಮರಿಸಿರುವುದನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರವು ಸುಶಾಸನ ಮಾಸ ಎಂಬ ಹೊಸ ಅಂಶವನ್ನು ಜಾರಿಗೆ ತಂದಿದ್ದು ಅದರ ಮೂಲಕ ದಿವಂಗತ ಪ್ರಧಾನಿಯವರಾದ ಅಟಲ್ ಬಿಹಾರಿ ವಾಜಪೇಯಿಯವರ ಆಶಯಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರೂ ಕೂಡ ಡಿಜಿಟಲ್ ಲರ್ನಿಂಗ್, ಸ್ಮಾರ್ಟ್ ಕ್ಲಾಸ್, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಉದ್ಯೋಗ ಲಭ್ಯತೆ ಇವುಗಳ ಬಗ್ಗೆ ಹೆಚ್ಚಿನ ಒತ್ತು ಕೊಡಬೇಕಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಯುಯುಸಿಎಂಎಸ್ ತಂತ್ರಾಂಶ ಹಾಗೂ ಎನ್.ಇ.ಪಿ.ಯನ್ನು ಪೂರ್ಣವಾಗಿ ಜಾರಿಗೆ ತರಬೇಕಾಗುತ್ತದೆ. ಹೆಚ್ಚು ಹೆಚ್ಚು ವರ್ಕ್ ಶಾಪ್‌ಗಳನ್ನು ಹಮ್ಮಿಕೊಂಡು ಈ ಬಗ್ಗೆ ವ್ಯಾಪಕ ಪ್ರಚಾರ ಮಾಡಿ ಈ ಬಗ್ಗೆ ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಇರುವ ಗೊಂದಲಗಳನ್ನು ನಿವಾರಿಸಬೇಕು ಹಾಗೂ ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪದವಿ ಕೋರ್ಸುಗಳಿಗೆ ಪ್ರವೇಶ ಪಡೆಯುವಂತೆ ಮಾಡಬೇಕು. ಬಹಳಷ್ಟು ರಾಜ್ಯಗಳು ಎನ್.ಇ.ಪಿ. ಜಾರಿಗೆ ತಂದಿರಲಿಲ್ಲ ಆದರೆ ಈಗ ಎಲ್ಲಾ ರಾಜ್ಯಗಳೂ ಕಡ್ಡಾಯವಾಗಿ ಜಾರಿಗೆ ತರಬೇಕಾಗಿದೆ ಎಂದರು. ಇತ್ತೀಚೆಗೆ ಉನ್ನತ ಶಿಕ್ಷಣ ಸಚಿವರು ಮಾತನಾಡಿ ಎಲ್ಲಾ ವಿಶ್ವವಿದ್ಯಾಲಯಗಳು ಆಫ್ ಲೈನ್ ಅಥವಾ ಆನ್ ಲೈನ್‌ನಲ್ಲಿ ದೂರಶಿಕ್ಷಣ ಪದವಿಯನ್ನು ಒದಗಿಸಬೇಕು ಎಂದಿದ್ದಾರೆ ಎಂದರು. ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಿಶ್ವವಿದ್ಯಾಲಯದ ಡೀನರು, ಶಾಲಾ ನಿರ್ದೇಶಕರು, ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಅವರ ಅಭಿಪ್ರಾಯವನ್ನು ಪಡೆಯಬೇಕು ಎಂಬ ಆಶಯ ಹೊಂದಿದ್ದೇನೆ ಎಂದು ತಿಳಿಸಿದ್ದಾರೆ ಎಂದು ಹೇಳಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದಂತೆ ಎಲ್ಲರೂ ಅಧಿಕಾರಕ್ಕೆ ಅಂಟಿಕೊಂಡಿರುವುದಿಲ್ಲ ಅಧಿಕಾರ ಬರುತ್ತದೆ ಹೋಗುತ್ತದೆ. ಆದರೆ ವಿಶ್ವವಿದ್ಯಾಲಯದ ಅಭಿವೃದ್ಧಿಯಲ್ಲಿ ತಾವೆಲ್ಲರೂ ನಮ್ಮ ಜೊತೆಗಿರಬೇಕು ಸಲಹೆ ಸಹಕಾರ ಕೊಡಬೇಕು ಎಲ್ಲರ ಅನುಭವ ಬೇಕಾಗಿದೆ. ಇದುವರೆಗೂ ತಾವೆಲ್ಲರೂ ಒಳ್ಳೆಯ ಸಹಕಾರ ಕೊಟ್ಟಿದ್ದೀರಿ. ಎನ್.ಇ.ಪಿ. ಜಾರಿಯಲ್ಲಿ ಪ್ರಾಂಶುಪಾಲರ ಪಾತ್ರ ಬಹಳ ದೊಡ್ಡದು ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾಹಿತಿ ನೀಡಬೇಕಾಗಿರುತ್ತದೆ ಈ ಎಲ್ಲಾ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ
ಎಂದರು. ಅಲ್ಲದೇ ನಿಮ್ಮ ಸಹಕಾರ ಯಾವಾಗಲೂ ಹೀಗೆ ಇರಲಿ ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು. ನಂತರ ಸಭೆಯ ವಿಷಯ ಸೂಚಿಯನ್ವಯ ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

**ಹಣಕಾಸು ವಿಭಾಗ**

**2022–ಸಿ9.01:** 2022–23ನೇ ಆರ್ಥಿಕ ವರ್ಷದ ದ್ವಿತೀಯ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:19–10–2022ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಚರ್ಚೆ:** **ಸರ್ಕಾರದ ಪತ್ರ ಸಂಖ್ಯೆ: ಇ–ಕಛೇರಿ ಸಂ:ಇಡಿ:489:ಯುಬಿವಿ:2022 ದಿನಾಂಕ:08–12–2022**

THE STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KUVEMPU UNIVERSITY, AS PER THE UGC REGULATIONS 2018

**ನಿರ್ಣಯ** ಸರ್ಕಾರದ ಪತ್ರ ಸಂಖ್ಯೆ:ಇ–ಕಛೇರಿ ಸಂ:ಇಡಿ:489:ಯುಬಿವಿ:2022 ದಿನಾಂಕ:08–12–2022 ಅನುಸಾರ ಸಕ್ಷಮ



Scanned with OKEN Scanner

ಪ್ರಾಧಿಕಾರಗಳ ಅನುಮೋದನೆಗೆ ಕಳುಹಿಸಿಕೊಟ್ಟಿರುವ ಪರಿಷ್ಕೃತ ಪರಿನಿಯಮ THE STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KUVEMPU UNIVERSITY, AS PER THE UGC REGULATIONS 2018 ನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**01 ಶ್ರೀ ವಿದ್ಯಾಶಂಕರ್ ಎಂ.ಹೆಚ್. ಸಹಾಯಕ ಪ್ರಾಧ್ಯಾಪಕರು, ಇವರನ್ನು ಅಮಾನತ್ತುಗೊಳಿಸಿರುವ ಕ್ರಮವನ್ನು ಸ್ಥಿರೀಕರಣಕ್ಕೆ ಮಂಡಿಸಿರುವ ಕುರಿತು.**

ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದಿನಾಂಕ:25-11-2022ರಂದು ನಕಲಿ ಪಿಹೆಚ್.ಡಿ ಪದವಿಯನ್ನು ಹೊಂದಿರುವ ಶ್ರೀ ವಿದ್ಯಾಶಂಕರ್ ಎಂ.ಹೆಚ್. ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬು ರವರು ಮಾತನಾಡಿ ಅಮಾನತ್ತುಗೊಳಿಸಿರುವ ಕ್ರಮವನ್ನು ಕಾನೂನುಬದ್ಧವಾಗಿ ಮಾಡಲಾಗಿದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆಯಲ್ಲಿ ಸದರಿ ಅಭ್ಯರ್ಥಿ ನಕಲಿ ಪಿಹೆಚ್.ಡಿ ಪದವಿ ಪ್ರಮಾಣ ಪತ್ರ ಪಡೆದಿರುವುದು ಗಮನಕ್ಕೆ ಬಂದಿದ್ದರೂ ಸದರಿಯವರನ್ನು ಸೇವೆಯಲ್ಲಿ ಮುಂದುವರೆಸಿರುವ ಕುರಿತು ಹಾಗೂ ಯಾವುದೇ ಶಿಸ್ತು ಕ್ರಮ ಜರುಗಿಸದಿರುವುದರಿಂದ ಈ ಕುರಿತು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಕುಲಪತಿಗಳು ಮತ್ತು ಕುಲಸಚಿವರನ್ನು ತರಾಟೆಗೆ ತೆಗೆದುಕೊಂಡು ನಮ್ಮ ಮೇಲೆಯೇ ಶಿಸ್ತು ಕ್ರಮ ಜರುಗಿಸುವುದಾಗಿ ತಿಳಿಸಿದರು. ಪೊಲೀಸ್ ದೂರು ದಾಖಲಾಗಿದ್ದರೂ ಏಕೆ ಅಮಾನತ್ತುಗೊಳಿಸಿರಲಿಲ್ಲ ಎಂದು ಈಗಿರುವ ಕುಲಪತಿಗಳು ಹಾಗೂ ಕುಲಸಚಿವರಿಗೆ ನೋಟೀಸ್ ನೀಡಬೇಕು ಎಂದು ಆಗ್ರಹಿಸಿದರು. ಸಾಕಷ್ಟು ಸಮರ್ಥನೆಗಳನ್ನು ನೀಡಲು ಪ್ರಯತ್ನಿಸಲಾಯಿತಾದರೂ ತೀವ್ರ ಒತ್ತಡ ಇದ್ದುದರಿಂದ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿಯೇ ಸರಿಯಾಗಿ ಪರಿಶೀಲಿಸದೇ ಇರುವುದು ವಿಶ್ವವಿದ್ಯಾಲಯದ ತಪ್ಪಲ್ಲವೇ ಎಂದು ಶ್ರೀ ಹೆಚ್.ಬಿ. ರಮೇಶ್‌ಬಾಬು ರವರು ಕೇಳಿದರು. ಅಲ್ಲದೇ ಇಷ್ಟು ವರ್ಷಗಳು ಯಾಕೆ ಈ ವಿಷಯ ಹೊರಬಂದಿಲ್ಲ.

ಮಾನ್ಯ ಕುಲಪತಿಗಳು ಮಾತನಾಡಿ ಮಾನವೀಯ ದೃಷ್ಟಿಯಿಂದ ಯಾವುದೇ ಕ್ರಮ ಜರುಗಿಸಿಲ್ಲದೇ ಇರಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಸದರಿ ಅಧ್ಯಾಪಕರು ಪಡೆದಿರುವ ಪ್ರಮಾಣಪತ್ರ ನಕಲಿ ಅಥವಾ ಅಸಲಿ ಎಂಬ ಬಗ್ಗೆ ಪರಿಶೀಲಿಸುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ.

ಸದಸ್ಯರಾದ ಶ್ರೀ ನಟೇಶ್ ಎಸ್.ಎಂ. ರವರು ಮಾತನಾಡಿ ನೇಮಕಾತಿ ಸಮಯದಲ್ಲಿ ಎ.ಐ.ಸಿ.ಟಿ.ಇ. ನಿಯಮಗಳನ್ನು ಪಾಲಿಸಿರಬಹುದು. ಆದರೆ ವಿಶ್ವವಿದ್ಯಾಲಯ ಯುಜಿಸಿ ನಿಯಮಗಳನ್ನು ಪಾಲಿಸುತ್ತದೆ ಆದ್ದರಿಂದ ಗೊಂದಲವಾಗಿರಬಹುದು.

ಶ್ರೀ ಧರ್ಮಪ್ರಸಾದ್ ಜಿ. ರವರು ದಾಖಲಾಗಿರುವುದು ಖಾಸಗಿ ದೂರಾಗಿದ್ದು ಸಕ್ಷಮ ಪ್ರಾಧಿಕಾರದ ಮುಂದೆ ತರದೇ ಎಫ್.ಐ.ಆರ್ ಹಾಕಲು ಅಥವಾ ಅಮಾನತ್ತು ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಶ್ರೀ ಬಿ.ಸಿ. ಬಸವರಾಜಪ್ಪರವರು ಮಾತನಾಡಿ ಖಾಸಗಿ ದೂರು ಆದರೂ ಅದು ಸರ್ಕಾರಕ್ಕೆ ಹೋಗಿರುವುದರಿಂದ ಸರ್ಕಾರದಿಂದ ವಿಶ್ವವಿದ್ಯಾಲಯದವರು ಏನು ಕ್ರಮ ಕೈಗೊಂಡಿದೆ ಎಂದು ಕೇಳಿರುತ್ತಾರೆ ಎಂದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಈ ಕುರಿತ ವಿಚಾರಣಾ ವರದಿಯಲ್ಲಿ ಸದರಿಯವರ ವಿರುದ್ಧ



Scanned with OKEN Scanner

ಯಾವುದೇ ಆರೋಪ ಸಾಬೀತಾಗದೇ ಇರುವುದರಿಂದ ಕ್ರಮ ಕೈಗೊಂಡಿರುವುದಿಲ್ಲ ಎಂಬುದನ್ನು ಸರ್ಕಾರಕ್ಕೆ ಸರಿಯಾಗಿ ತಿಳಿಸದೇ ಏಕಾಏಕಿ ಅಮಾನತ್ತು ಮಾಡಿರುವುದು ಸರಿಯಲ್ಲ ಎಂದು ಹೇಳಿದರು.

ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ನಡಾವಳಿಗಳು ಕಾಲಕಾಲಕ್ಕೆ ಬರದೇ ಇರುವುದೇ ಇದಕ್ಕೆಲ್ಲಾ ಕಾರಣ ಎಂದು ಹೇಳಿದರು.

ಶ್ರೀ ಹೆಚ್.ಬಿ. ರಮೇಶ್‌ಬಾಬು ರವರು ಮಾತನಾಡಿ ಈಗ ಎಂ.ಹೆಚ್. ವಿದ್ಯಾಶಂಕರ್ ಇವರ ವಿರುದ್ಧ ತೆಗೆದುಕೊಂಡಿರುವ ಕ್ರಮ ತಪ್ಪಾಗಿದೆ ನಾವು ಇದನ್ನು ಖಂಡಿಸುತ್ತೇವೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ಹಿಂದಿನ ಕುಲಸಚಿವರು ಇದ್ದಾಗಿನಿಂದಲೂ ಈ ವಿಷಯ ಸಭೆಗೆ ಮಂಡನೆಯಾಗುತ್ತಿದೆ ಮೂರು ವರ್ಷಗಳಿಂದ ಎಲ್ಲರಿಗೂ ವಿಷಯ ಗೊತ್ತಿದೆ ಏಕಾಏಕಿ ತೆಗೆದುಕೊಂಡ ನಿರ್ಧಾರ ಅಲ್ಲ ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಹಿಂದೆ ಒಂದು ಪ್ರಕರಣದಲ್ಲಿ ಪ್ರಾಧಿಕಾರಗಳ ಅನುಮೋದನೆ ಪಡೆಯದೇ, ವಿಶ್ವವಿದ್ಯಾಲಯದ ಪ್ರಕರಣವನ್ನು ಪರಿಗಣಿಸಿ ಗೌರವಾನ್ವಿತ ರಾಜ್ಯಪಾಲರು ಅಮಾನತ್ತು ಮಾಡಿದ್ದರೂ ಸಹ ಸದರಿ ಪ್ರಕರಣದ ಬಗ್ಗೆ ಪ್ರಾಧಿಕಾರಗಳ ಅನುಮತಿ ಪಡೆದಿಲ್ಲ ಎಂಬ ಕಾರಣಕ್ಕೆ ಸದರಿ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ. ಆದ್ದರಿಂದ ಪ್ರಾಧಿಕಾರಗಳ ಅನುಮೋದನೆ ಪಡೆಯದೇ ಶ್ರೀ ವಿದ್ಯಾಶಂಕರ್ ಎಂ. ಹೆಚ್ ಇವರ ಪ್ರಕರಣವೂ ಕೂಡ ನ್ಯಾಯಾಲಯದಲ್ಲಿ ವಜಾ ಆಗಬಹುದು ಎಂದು ಹೇಳಿದರು. ಸದರಿಯವರು ಪಡೆದಿರುವ ಎಂ.ಟೆಕ್ ಪದವಿಯು ಎ.ಐ.ಸಿ.ಟಿ.ಇ ಅನುಮೋದನೆ ಆಗದಿದ್ದರೂ ಸಹ ನಮ್ಮದೇ ವಿಶ್ವವಿದ್ಯಾಲಯದ ಪದವಿಯಾಗಿರುವುದರಿಂದ ಪರಿಗಣಿಸಲೇಬೇಕು ಎಂಬ ಕಾರಣಕ್ಕೆ ನೇಮಕಾತಿ ಮಾಡಲಾಗಿರುತ್ತದೆ ಎಂದು ಹೇಳಿದರು,

ಶ್ರೀ ಹೆಚ್.ಬಿ. ರಮೇಶ್‌ಬಾಬು ರವರು ಮಾತನಾಡಿ ಸದರಿ ಹುದ್ದೆಯ ನೇಮಕಾತಿಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಏನು? ಎಂ.ಟೆಕ್ ಪದವಿ ಇರುವುದರಿಂದ ನೇಮಕ ಆಗಿರಬಹುದು. ಆದ್ದರಿಂದ ಇವರ ವಿರುದ್ಧ ಕ್ರಮ ಕೈಗೊಳ್ಳುವ ಮೊದಲು ಪ್ರಾಧಿಕಾರದ ಗಮನಕ್ಕೆ ತರಬೇಕಿತ್ತು ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಯಾವುದೇ ದೂರ ಶಿಕ್ಷಣದವರು ವಿಶ್ವವಿದ್ಯಾಲಯದ ಹೆಸರಿನಲ್ಲಿ ನಕಲಿ ಪ್ರಮಾಣಪತ್ರ ನೀಡಿದರೆ ವಿದ್ಯಾರ್ಥಿಯ ತಪ್ಪು ಏನಿರುತ್ತದೆ. ಸರ್ಕಾರ ಒತ್ತಡ ಹಾಕಿದರೆ ಏನು ಬೇಕಾದರು ಮಾಡಬಹುದೇ ಎಂದರು. ಶ್ರೀ ಹೆಚ್. ಬಿ. ರಮೇಶ್‌ಬಾಬು ರವರು ಸಹ ಇದಕ್ಕೆ ಸಹಮತ ವ್ಯಕ್ತಪಡಿಸಿ ಏನೂ ಗೊತ್ತಿಲ್ಲದ ಈ ಅಭ್ಯರ್ಥಿಯ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಸಹ ಸಿಂಡಿಕೇಟ್ ಸಭೆಯ ಗಮನಕ್ಕೆ ತರದೇ ಇರುವುದು ತಪ್ಪು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆಗೆ ಸದರಿ ವಿಷಯದ ಕುರಿತು ವಿವರಿಸಿದ್ದೇವೆ, ಆದರೂ ಸದರಿ ಸಭೆಯ ಸದಸ್ಯರುಗಳು ಮಾತನಾಡಿ ನಕಲಿ ಪಿಹೆಚ್.ಡಿ ಪ್ರಮಾಣ ಪತ್ರವನ್ನು ಹೊಂದಿರುವ ಒಬ್ಬರನ್ನು ಹನ್ನೆರಡು ವರ್ಷಗಳಿಂದ ಇಟ್ಟುಕೊಂಡಿದ್ದೀರಿ. ನಿಮ್ಮ ಮೇಲೆಯೇ ಏಕೆ ಕ್ರಮ ಕೈಗೊಳ್ಳಬಾರದು ಎಂದು ನಮ್ಮ ಮೇಲೆಯೇ ರೇಗಾಡಿದರು ಇಲ್ಲಿ ಮಾತಾಡಿದಷ್ಟು ಸುಲಭವಿಲ್ಲ ಎಂದು ಹೇಳಿದರು.

ಶ್ರೀ ಎನ್. ಆರ್. ಮಂಜುನಾಥ್ ರವರು ಮಾತನಾಡಿ ಒಬ್ಬ ವ್ಯಕ್ತಿಯನ್ನು ಬಲಿಪಶು ಮಾಡುವುದು ಸರಿಯಲ್ಲ.

ಕುಲಸಚಿವರು ಮಾತನಾಡಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸಭೆಯಲ್ಲಿ ನಮ್ಮನ್ನು ಮಾತನಾಡಲು ಬಿಡುವುದೇ ಇಲ್ಲ ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ವಿಶ್ವವಿದ್ಯಾಲಯದ ವಿಷಯದಲ್ಲಿ ವಿಶವಿದ್ಯಾಲಯದ ಕಾಯ್ದೆಯನ್ವಯ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದೇ ಏನೂ ಮಾಡಲು ಅವಕಾಶವಿರುವುದಿಲ್ಲ ಎಂದು ಹೇಳಿದರು.



Scanned with OKEN Scanner

ಕುಲಸಚಿವರು ಮಾತನಾಡಿ ನಾವು ಅಮಾನತ್ತು ಮಾಡಿರುವುದು ಸದರಿ ಅಭ್ಯರ್ಥಿ ನೀಡಿರುವ ನಕಲಿ ಪ್ರಮಾಣ ಪತ್ರ ನೀಡಿರುವುದರ ವಿರುದ್ಧ, ಅವರು ಅದಕ್ಕೆ ತಮ್ಮ ಸಮರ್ಥನೆಯನ್ನು ನೀಡಿ ಸರಿ ಮಾಡಿಕೊಳ್ಳುತ್ತಾರೆ ಎಂದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಗೌರವಾನ್ವಿತ ರಾಜ್ಯಪಾಲರೇ ಅಮಾನತ್ತು ಮಾಡಿದ್ದರೂ ಸದರಿ ಪ್ರಕರಣದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಇರುವುದರಿಂದ ಮಾನ್ಯ ಉಚ್ಛನ್ಯಾಯಾಲಯವು ಸದರಿ ಪ್ರಕರಣವನ್ನು ರದ್ದುಗೊಳಿಸಿತು. ನಂತರ ಸದರಿಯವರ ತಪ್ಪು ಇದ್ದರೂ ಮಾನವೀಯತೆಯ ದೃಷ್ಟಿಯಿಂದ ಕೆಲವು ವೇತನ ಬಡ್ತಿಗಳನ್ನು ಕಟಾಯಿಸಿ ಕೆಲಸಕ್ಕೆ ಮರು ಸೇರ್ಪಡೆಗೊಳಿಸಿರುವ ಪ್ರಕರಣ ನಮ್ಮ ವಿಶ್ವವಿದ್ಯಾಲಯದಲ್ಲಿಯೇ ನಡದಿದೆ. ಈ ಪ್ರಕರಣದಲ್ಲಿ ಅಮಾನತ್ತು ಮಾಡಿರುವ ಪ್ರಕ್ರಿಯೆ ತಪ್ಪಾಗಿದೆ ಹಾಗಾಗಿ ಇದು ಹೆಚ್ಚು ದಿನ ನಡೆಯುವುದಿಲ್ಲ ಎಂದು ಹೇಳಿದರು.

ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ಪ್ರಾದೇಶಿಕ ಜಂಟಿ ನಿರ್ದೇಶಕರು ಇವರು ಮಾತನಾಡಿ ತನಿಖಾ ವರದಿಯು ಸಕ್ಷಮ ಪ್ರಾಧಿಕಾರಕ್ಕೆ ಬರಲೇಬೇಕು, ಅದರ ಮೇಲೆ ನಿರ್ಣಯ ತೆಗೆದುಕೊಳ್ಳಲು ಈ ಪ್ರಾಧಿಕಾರಕ್ಕೆ ಪೂರ್ಣ ಅಧಿಕಾರ ಇದೆ ಎಂದು ಹೇಳಿದರು.

ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ತನಿಖಾ ವರದಿ, ಸಿಂಡಿಕೇಟ್ ನಿರ್ಣಯಗಳು ಎಲ್ಲವೂ ಅಭ್ಯರ್ಥಿಯ ಪರವಾಗಿಯೇ ಇದೆ ಅದನ್ನು ಸರ್ಕಾರಕ್ಕೆ ಕಳುಹಿಸಿಯೂ ಆಗಿದೆ ಎಂದು ಹೇಳಿದರು.

ಶ್ರೀ ಬಿ.ಸಿ. ಬಸವರಾಜಪ್ಪ ರವರು ಮಾತನಾಡಿ ಇಷ್ಟೆಲ್ಲಾ ವರದಿಗಳನ್ನು ಸರ್ಕಾರಕ್ಕೆ ನೀಡಿದ ಮೇಲೂ ಮತ್ತೆ ಏಕೆ ಸರ್ಕಾರದಿಂದ ಈ ರೀತಿ ಒತ್ತಡ ಬರುತ್ತಿದೆ ಎಂದು ಕೇಳಿದರು.

ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ಪ್ರಾದೇಶಿಕ ಜಂಟಿ ನಿರ್ದೇಶಕರು, ಇವರು ಮಾತನಾಡಿ ಪ್ರಸ್ತುತ ಸದರಿ ಅಭ್ಯರ್ಥಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಯಿಲ್ಲದೇ ಅಮಾನತ್ತು ಮಾಡಿರುವ ಕ್ರಮಕ್ಕೆ ಸಿಂಡಿಕೇಟ್ ಸಭೆಯು ತೆಗೆದುಕೊಂಡಿರುವ ನಿರ್ಣಯವನ್ನು ಸರ್ಕಾರಕ್ಕೆ ಪತ್ರ ಬರೆದು ತಿಳಿಸಬಹುದು ಎಂದು ಹೇಳಿದರು.

ಶ್ರೀ ಹೆಚ್. ಬಿ. ರಮೇಶ್‌ಬಾಬು ರವರು ಮಾತನಾಡಿ ನೀವು ಸರ್ಕಾರದ ಆದೇಶವನ್ನು ಪಾಲಿಸಿದ್ದೀರಿ ಈಗ ಸಿಂಡಿಕೇಟ್ ನಿರ್ಣಯವನ್ನು ಸರ್ಕಾರಕ್ಕೆ ತಿಳಿಸಿ ಎಂದು ಹೇಳಿದರು.

ಕುಲಸಚಿವರು(ಪರೀಕ್ಷಾಂಗ)ರವರು ಮಾತನಾಡಿ ಸದರಿಯವರ ನೇಮಕಾತಿ ಯಾವ ರೀತಿ ಆಗಿದೆ ಹಾಗೂ ಪಿಹೆಚ್.ಡಿ ಪದವಿ ಆಧಾರದ ಮೇಲೆ ಯಾವುದೇ ಬಡ್ತಿ ನೀಡಿಲ್ಲ ಎಂಬ ಪೂರ್ಣ ವಿವರಗಳನ್ನು ಸರ್ಕಾರದ ಗಮನಕ್ಕೆ ತರಬೇಕಿತ್ತು. ಅಲ್ಲದೇ ಯಾವುದೇ ಕ್ರಮ ಕೈಗೊಳ್ಳಬೇಕಿದ್ದರೂ ಸಿಂಡಿಕೇಟ್ ಸಭೆಯ ಗಮನಕ್ಕೆ ತರಲೇಬೇಕು ಹಾಗೂ ಮಾನ್ಯ ಕುಲಪತಿಗಳ ಗಮನಕ್ಕೆ ತರದೇ ಯಾವ ನಿರ್ಣಯಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ ಎಂದು ಹೇಳಿದರು.

ನಿರ್ಣಯ ಸುಧೀರ್ಘ ಚರ್ಚೆಯ ನಂತರ ಸಕ್ಷಮ ಪ್ರಾಧಿಕಾರದ ಗಮನಕ್ಕೆ ತರದೇ, ಸಿಂಡಿಕೇಟ್ ಸಭೆಯ ಅನುಮೋದನೆಯಿಲ್ಲದೇ ಸದರಿ ಅಭ್ಯರ್ಥಿಯನ್ನು ಅಮಾನತ್ತು ಮಾಡಿರುವ ಕ್ರಮ ಸರಿಯಲ್ಲ ಎಂದು ಸಿಂಡಿಕೇಟ್ ಸಭೆಯು ಅಭಿಪ್ರಾಯ ಪಟ್ಟಿತು. ಹಾಗೂ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಸೂಚಿಸಿತು

2. **ಡಾ. ಬಿ.ಜಿ. ಧನಂಜಯ್ ರವರು ಮಾತನಾಡಿ ಶೈಕ್ಷಣಿಕ ವೇಳಾಪಟ್ಟಿಯನ್ನು ಕನಿಷ್ಟ 25 ರಿಂದ 30 ದಿನ ಮೂಂದೂಡಿ ಫೆಬ್ರವರಿಯಲ್ಲಿ ಪರೀಕ್ಷೆ ನಡೆಸುವಂತೆ ಕೋರಿದರು.**

ಪ್ರಾದೇಶಿಕ ಜಂಟಿ ನಿರ್ದೇಶಕರು ಕೂಡ ಮಾತನಾಡಿ ಬೇರೆ ಕೆಲವು ವಿಶ್ವವಿದ್ಯಾಲಯಗಳೂ ಶೈಕ್ಷಣಿಕ ವೇಳಾಪಟ್ಟಿಯನ್ನು ಮೂಂದೂಡಿರುತ್ತಾರೆ ಆದ್ದರಿಂದ ಮುಂದೂಡಬಹುದು ಎಂದು ಹೇಳಿದರು.

ಶ್ರೀ ನಟೇಶ್ ಎಸ್. ಎಂ. ರವರು ಮಾತನಾಡಿ ಇನ್ನೂ ಪ್ರಥಮ ಸೆಮಿಸ್ಟರ್ ಫಲಿತಾಂಶ ಬಂದಿಲ್ಲ. ಸಬ್‌ಜೆಕ್ಟ್ ಮ್ಯಾಪಿಂಗ್ ಆಗ್ತಾ ಇಲ್ಲ. ಸುಮಾರು ಟೆಕ್ನಿಕಲ್ ಪ್ರಾಬ್ಲಮ್ ಇದೆ ಒಬ್ಬರೇ ನೋಡಲ್ ಆಫೀಸರ್ ಇದ್ದಾರೆ ಅವರು ಬ್ಯುಸಿ ಇರುತ್ತಾರೆ. ಪ್ರಾಂಶುಪಾಲರುಗಳ ಮೇಲೆ ಒತ್ತಡ ಇರುತ್ತದೆ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕಬೇಕು ಎಂದು ಹೇಳಿದರು.



Scanned with OKEN Scanner

ಶ್ರೀ ಎನ್. ಆರ್ ಮಂಜುನಾಥ್ ರವರು ಮಾತನಾಡಿ ಪ್ರತಿ ವರ್ಷ ಈ ರೀತಿ ಆಗಬಾರದು 3-4 ಪ್ರಾಂಶುಪಾಲರನ್ನು ಇಟ್ಟುಕೊಂಡು ಯಾವುದೇ ಸಮಸ್ಯೆ ಬರದಂತೆ ಶೈಕ್ಷಣಿಕ ವೇಳಾಪಟ್ಟಿ ಮಾಡಬೇಕು ಎಂದು ಹೇಳಿದರು.

ಶ್ರೀ ಬಸವರಾಜಪ್ಪ ಬಿ.ಸಿ. ರವರು ಮಾತನಾಡಿ ಮಂಗಳೂರಿನಲ್ಲಿ ಈಗಾಗಲೇ ಈ ಸಮಸ್ಯೆ ಸರಿ ಮಾಡಿರುತ್ತಾರೆ ಎಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ಫೆಬ್ರವರಿ ಅಂತಿಮ ದಿನದವರೆಗೆ ಶೈಕ್ಷಣಿಕ ವೇಳಾಪಟ್ಟಿ ಮುಂದೂಡಿದರೆ ಎಲ್ಲ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿದು ಎನ್.ಇ.ಪಿ. ಸುಗಮವಾಗಿ ಪಾಲಿಸಬಹುದು ಎಂದು ಹೇಳಿದರು.

ಪ್ರಾದೇಶಿಕ ಜಂಟಿ ನಿರ್ದೇಶಕರು ಮಾತನಾಡಿ ಈಗಾಗಲೇ ಶೈಕ್ಷಣಿಕ ವೇಳಾಪಟ್ಟಿಯ ಗೊಂದಲದಿಂದ ಮೌಲ್ಯಮಾಪನ ಮಾಡಿಸುವುದು ಕಷ್ಟವಾಗುತ್ತಿದೆ ಅತಿಥಿ ಉಪನ್ಯಾಸಕರು ಮೌಲ್ಯಮಾಪನಕ್ಕೆ ಹಾಜರಾಗುತ್ತಿಲ್ಲ ಸರದಿಯ ಮೇಲೆ ಮೌಲ್ಯಮಾಪನಕ್ಕೆ ಕಳುಹಿಸಬೇಕಾಗುತ್ತದೆ ಇಲ್ಲದಿದ್ದಲ್ಲಿ ತರಗತಿಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರು.

ಶ್ರೀ ಬಿ. ನಿರಂಜನಮೂರ್ತಿ ರವರು ಮಾತನಾಡಿ ಸರ್ಕಾರದಿಂದ ಏಕರೂಪದ ಶೈಕ್ಷಣಿಕ ವೇಳಾಪಟ್ಟಿ ಮಾಡಿರುವುದರಿಂದ ಈ ಸಮಸ್ಯೆ ಆಗಿದೆ. ಸರ್ಕಾರದ ಸಭೆಯಲ್ಲಿ ಭಾಗವಹಿಸಿದ್ದ ಕುಲಪತಿಗಳು ಈ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿತ್ತು ಎಂದು ಹೇಳಿದರು.

ಸದಸ್ಯರಾದ ಶ್ರೀ ಧನಂಜಯ್ ಬಿ.ಜಿ. ರವರು ಮಾತನಾಡಿ ಈಗಾಗಲೇ ವಿಸ್ತಾರವಾದ ಚರ್ಚೆ ಆಗಿದೆ ಈಗ 3 ಮತ್ತು 5ನೇ ಸೆಮಿಸ್ಟರ್ ತರಗತಿ ನಡೆಯುತ್ತಿವೆ. 2023ರ ಜನವರಿ 04ರಿಂದ ಪರೀಕ್ಷೆಗಳು ಪ್ರಾರಂಭವಾದರೆ ಕೊಠಡಿ ಸಮಸ್ಯೆ, ಅಧ್ಯಾಪಕರ ಸಮಸ್ಯೆ ಆಗುತ್ತದೆ, ತರಗತಿಗಳೂ ಇನ್ನೂ ಪೂರ್ಣಗೊಂಡಿಲ್ಲ, ಆದ್ದರಿಂದ ಇನ್ನೂ 25 ರಿಂದ 30 ದಿನ ಮುಂದೂಡಲೇಬೇಕು ಎಂದು ಹೇಳಿದರು. ಅಲ್ಲದೇ ಎಲೆಕ್ಟಿವ್ ಪತ್ರಿಕೆಗಳ ಕುರಿತಾಗಿಯೂ ಗೊಂದಲವಿದೆ ಎಂದರು.

ಮಾನ್ಯ ಕುಲಪತಿಗಳು ಹೊಸ ಶಿಕ್ಷಣ ನೀತಿಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಒಂದೇ ನಿಯಮ ಇರುತ್ತದೆ ಹೀಗೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ ಎಂದು ಹೇಳಿದರು.

ಪ್ರಾದೇಶಿಕ ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ಮಂಗಳೂರು ವಿಶ್ವವಿದ್ಯಾಯದಲ್ಲಿ ಈಗಾಗಲೇ ಮುಂದೂಡಲಾಗಿದೆ ಇಲ್ಲೂ ಮುಂದೂಡಬಹುದು ಎಂದು ಹೇಳಿದರು.

ಶೈಕ್ಷಣಿಕ ವೇಳಾಪಟ್ಟಿಗೆ ಸಂಬಂಧಿಸಿದ ನಿರ್ಣಯಗಳನ್ನು ಯಾರು ಮಾಡಬೇಕೋ ಅವರು ಮಾಡುತ್ತಿಲ್ಲ ಯಾರೋ ಮಾಡುತ್ತಾರೆ ಆದ್ದರಿಂದ ಈ ಸಮಸ್ಯೆಗಳು ಬರುತ್ತವೆ ಎಂದು ಶ್ರೀ ಬಿ. ನಿರಂಜನಮೂರ್ತಿ ರವರು ಹೇಳಿದರು.

ಕುಲಸಚಿವರು ಮಾತನಾಡಿ ಬೇರೆ ವಿಶ್ವವಿದ್ಯಾಲಯಗಳು ಮುಂದೂಡಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ನಿರ್ಣಯ:** ಚರ್ಚೆಯ ನಂತರ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದೂಡಲು ಸಭೆಯು ಅನುಮೋದನೆ ನೀಡಿತು.

3. **ಡಾ. ಧನಂಜಯ್ ಬಿ.ಜಿ. ರವರು ಮಾತನಾಡಿ** ವಿದ್ಯಾರ್ಥಿಗಳ ಒಟ್ಟು ಪ್ರವೇಶಾತಿಯನ್ನು ಹೆಚ್ಚಿಸಲು ಎನ್.ಇ.ಪಿ ಬಗ್ಗೆ ಹೆಚ್ಚು ಪ್ರಚುರಪಡಿಸಬೇಕು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಎನ್.ಇ.ಪಿ ಬಗ್ಗೆ ಮನವರಿಕೆ ಮಾಡಬೇಕು ಎಂದು ಹೇಳಿದರು. ಹಾಗೂ ಯುಯುಸಿಎಂಎಸ್ ನೋಡಲ್ ಅಧಕಾರಿಗಳು ಒಬ್ಬರೇ ಇದ್ದು ಎಲ್ಲ ಗೊಂದಲಗಳನ್ನು ಪರಿಹರಿಸಲು ಒಬ್ಬರಿಗೆ ಕಷ್ಟವಾಗುವುದರಿಂದ ಇನ್ನೂ ಐದು ಜನಕ್ಕೆ ಈ ಬಗ್ಗೆ ತರಬೇತಿ ನೀಡುವ ಅಗತ್ಯವಿದೆ ಎಂದು ಹೇಳಿದರು. ಸದಸ್ಯರಾದ ಶ್ರೀಮತಿ ಭಾರತಿಯವರು ಇದಕ್ಕೆ ಧ್ವನಿಗೂಡಿಸಿದರು.

ಡಾ. ಬಿ.ಜಿ. ಧನಂಜಯ್ ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮುಂದುವರೆಸಬೇಕು ಎಂದು ಹೇಳಿದರು ಇತರೆ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.



Scanned with OKEN Scanner

ಮಾನ್ಯ ಕುಲಪತಿಗಳು ಮಾತನಾಡಿ ಸಂದರ್ಶನ ಮಾಡಲೇಬೇಕು ಎಂದು ಹೇಳಿದರು.

ಪ್ರಾದೇಶಿಕ ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ಸಂದರ್ಶನ ಮಾಡಿ ಅವರನ್ನೇ ಮುಂದುವರೆಸಿ ಕೋರ್ಸು/ ತರಬೇತಿಗಳನ್ನು ಪೂರ್ಣಗೊಳಿಸಬೇಕು ಎಂಬ ಷರತ್ತು ವಿಧಿಸಬೇಕು ಅಲ್ಲದೇ

ಯಾವ ಅತಿಥಿ ಉಪನ್ಯಾಸಕರ ಸೇವೆ ತೃಪ್ತಿಕರವಾಗಿರುವುದಿಲ್ಲವೋ ಅಂತಹವರ ಮೇಲೆ ಕ್ರಮ ಕೈಗೊಳ್ಳಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ಒಂದು ವರ್ಷಕ್ಕೆ ಫರ್ಫಾರ್‌ಮೆನ್ಸ್ ಆಧಾರದಲ್ಲಿ ಸಂದರ್ಶನ ನಡೆಸಿ ಮುಂದವರೆಸಬೇಕು ಇದಾದ ಮೇಲೂ ಕಾರ್ಯಭಾರ ಉಳಿದಲ್ಲಿ ಹೊಸಬರನ್ನು ನೇಮಿಸಬಹುದು ಎಂದು ಹೇಳಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

**ನಿರ್ಣಯ:** ಚರ್ಚೆಯ ನಂತರ ಈ ಒಂದು ವರ್ಷಕ್ಕೆ ಫರ್ಫಾರ್‌ಮೆನ್ಸ್ ಆಧಾರದಲ್ಲಿ ಸಂದರ್ಶನ ನಡೆಸಿ ಮುಂದುವರೆಸಲು ಹಾಗೂ ಇದಾದ ನಂತರವೂ ಕಾರ್ಯಭಾರ ಉಳಿದಲ್ಲಿ ಹೊಸಬರನ್ನು ತೆಗೆದುಕೊಳ್ಳಲು ಸಭೆಯು ಅನುಮೋದನೆ ನೀಡಿತು.

4 **ಶ್ರೀ ರಾಮಲಿಂಗಪ್ಪ ಹೆಚ್. ರವರು ಮಾತನಾಡಿ ವಿಶ್ವವಿದ್ಯಾಲಯದಿಂದ 12-11-2022ರಂದು ಒಂದು ಸುತ್ತೋಲೆ ಬಂದಿದೆ ಅದರಲ್ಲಿ 2012ರಿಂದ ಉನ್ನತೀಕರಣದ ಮೂಲಕ ಬಡ್ತಿ ಹೊಂದಿದ ಹುದ್ದೆಗಳನ್ನು ಹಿಂಪಡೆದು ಮಂಜೂರಾದ ಹುದ್ದೆಗಳಿಗನ್ವಯ ವೇತನ ನಿಗದೀಕರಣ ಮಾಡಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಆದೇಶ ಹೊರಡಿಸಲಾಗಿದೆ ಎಂದು ಸದರಿ ಆದೇಶವನ್ನು ಸಭೆಯಲ್ಲಿ ಓದಿದರು. ಈ ರೀತಿ ಕುಲಸಚಿವರು ಏಕಾ ಏಕಿ ಈ ರೀತಿ ಕ್ರಮ ಕೈಗೊಂಡಿರುತ್ತಾರೆ. ಇದರಿಂದ ನೌಕರರಲ್ಲಿ ಆತಂಕ ಆವರಿಸಿದೆ ಎಂದು ಹೇಳಿದರು.**

ಮಾನ್ಯ ಕುಲಪತಿಗಳು ಮಾತನಾಡಿ ಇಲ್ಲ ಹಾಗೆ ಮಾಡಲು ಬರುವುದಿಲ್ಲ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ರಾಮಲಿಂಗಪ್ಪ ಹೆಚ್. ರವರು ಈಗಾಗಲೇ ಆದೇಶ ಆಗಿದೆ ಎಂದು ಹೇಳಿದರು. ಮಾನ್ಯ ಕುಲಪತಿಗಳು ನನ್ನ ಅನುಮೋದನೆಯಿಲ್ಲದೆ ಹೇಗೆ ಮಾಡಲಾಗಿದೆ ಎಂದರು.

ಕುಲಸಚಿವರು ಮಾತನಾಡಿ ಇದು ಸಮಿತಿ ಅಲ್ಲ ಸಿಬ್ಬಂದಿಗಳ ಆಂತರಿಕ ನಿಯೋಜನೆ, ಏಕಾ ಏಕಿ ಮಾಡಿರುವುದಲ್ಲ ಜೆ.ಡಿ.ಯವರು ಇಲ್ಲೇ ಇದ್ದಾರೆ ಅವರ ಕಛೇರಿಯಿಂದ ಕೆಟಿಸಿ -19 ಪ್ರಕಾರ ವೇತನದ ಹುಂಡಿಯನ್ನು ಸಲ್ಲಿಸುವಂತೆ ಪತ್ರ ಬಂದಿದೆ. ಸರ್ಕಾರದಿಂದಲೂ ಪತ್ರ ಬಂದಿದೆ. ಆದ್ದರಿಂದ ಈ ಕುರಿತು ಪರಿಶೀಲನೆ ಮಾಡಲೇಬೇಕಾಗಿರುವ ಹಿನ್ನೆಲೆಯಲ್ಲಿ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದ್ದು ಸದರಿಯವರು ಉನ್ನತೀಕರಣದ ಹುದ್ದೆಗಳನ್ನು ಪಟ್ಟಿ ಮಾಡಿ ಕೊಡುತ್ತಾರೆ ಅದನ್ನು ಮಾನ್ಯ ಕುಲಪತಿಗಳಿಗೆ ಸಲ್ಲಿಸುತ್ತೇನೆ ಅಷ್ಟೇ ಎಂದರು.

ಪ್ರಾದೇಶಿಕ ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ನನಗೂ ಸುತ್ತೋಲೆ ಬಂದಿದೆ, ಪ್ರಧಾನ ಕಾರ್ಯದರ್ಶಿಯವರೂ ನನಗೂ ಚಾರ್ಜ್ ಮಾಡಿದ್ದಾರೆ, ಆದ್ದರಿಂದ ಇದನ್ನು ಸರಿಮಾಡಿಕೊಳ್ಳಬೇಕು, ಉನ್ನತೀಕರಣದ ಹುದ್ದೆಗಳನ್ನು ಪರಿಶೀಲಿಸಿ ಪಟ್ಟಿ ಮಾಡಿ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯಬೇಕು ಎಂದು ಹೇಳಿದರು.

ಎಲ್ಲಾ ಸದಸ್ಯರು ಮಾತನಾಡಿ ಆದರೂ ಸೇವೆಯಿಂದ ಹಿಂಬಡ್ತಿ ಮಾಡುವುದು ಬೇಡ ಎಂದರು.

ಸದಸ್ಯರಾದ ಶ್ರೀ ರಮೇಶಬಾಬುರವರು ಮಾತನಾಡಿ ಈಗಾಗಲೇ ಉನ್ನತೀಕರಣದ ಮೂಲಕ ಬಡ್ತಿ ನೀಡಿ ಹತ್ತು ವರ್ಷಗಳ ಮೇಲಾಗಿದೆ ಆ ನಂತರವು ಬಡ್ತಿಗಳನ್ನು ನೀಡಲಾಗಿದೆ ಈಗ ಏಕಾಏಕಿ ಬಡ್ತಿಗಳನ್ನು ಹಿಂಪಡೆಯುವುದು ನ್ಯಾಯವಲ್ಲ ಎಂದು ಹೇಳಿದರು.

ಕುಲಸಚಿವರು(ಪರೀಕ್ಷಾಂಗ)ರವರು ಮಾತನಾಡಿ ಯಾವುದೇ ನಿರ್ಧಾರಗಳಾದರೂ ಸಿಂಡಿಕೇಟ್ ಸಭೆಗೆ ಮಂಡಿಸಲೇ ಬೇಕಲ್ಲವೆ ಎಂದರು. ನನಗೂ ಅಧ್ಯಾಪಕೇತರ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಕಳುಹಿಸಿಕೊಡಿ ಎಂದು ಒಂದು ಪತ್ರ ಬಂದಿದೆ ಅದರಲ್ಲಿ ಕುಲಪತಿಗಳ ಅನುಮೋದನೆ ಆಗಿರುವುದಿಲ್ಲ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಇದು ವಿಚಾರಣಾ ಸಮಿತಿ ಅಲ್ಲ, ಸರ್ಕಾರದ ಸುತ್ತೋಲೆಯನ್ವಯ ಉನ್ನತೀಕರಣದ ಕುರಿತು ಪರಿಶೀಲನೆಗೆ ಮಾನವ ಸಂಪನ್ಮೂಲ ವಿಭಾಗಕ್ಕೆ ಹೆಚ್ಚುವರಿ ಸಿಬ್ಬಂದಿಗಳನ್ನು ಆಂತರಿಕವಾಗಿ ನಿಯೋಜಿಸಲಾಗಿದೆ ಅಷ್ಟೇ ಎಂದು ಹೇಳಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಅಧ್ಯಾಪಕೇತರ ನೌಕರರ ಸೌಲಭ್ಯಗಳನ್ನು ನೀಡುವಾಗ ಮಾತ್ರ ಎಲ್ಲಾ ನಿಯಮಗಳು ಇತರೆ ವಿಷಯಗಳು ಅಡ್ಡ ಬರುತ್ತವೆ. ಹಿಂದಿನ ಸಭೆಯ ನಿರ್ಣಯದಂತೆ ಸರ್ಕಾರಕ್ಕೆ ವಿಲಿನೀಕರಣ ನೌಕರರ ಮಾಹಿತಿಯನ್ನು ಕಳುಹಿಸಲು ಕಡತ ಮಂಡಿಸಿ ಈಗಾಗಲೇ ತಿಂಗಳು ಕಳೆದರೂ ಇನ್ನೂ ಮಾಹಿತಿ ಹೋಗಿಲ್ಲ, ಸಿಂಡಿಕೇಟ್ ಸಭೆಯ ನಡಾವಳಿಗಳು ಸಹ ಬಹಳ ವಿಳಂಬವಾಗಿ ಬರುತ್ತಿವೆ ಇದರಿಂದ ನಿರ್ಣಯಗಳನ್ನು ಜಾರಿಗೊಳಿಸುವುದು ಇನ್ನೂ ವಿಳಂಭವಾಗುತ್ತದೆ ಎಂದು ಹೇಳಿದರು. ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳು ಇನ್ನೂ ಜಾರಿಯಾಗಿಲ್ಲ.

ಕುಲಸಚಿವರು ಮಾತನಾಡಿ ನಮಗೂ ತುಂಬಾ ಜವಾಬ್ದಾರಿಗಳಿವೆ ವಾರದಲ್ಲಿ ಒಂದು ಎರಡು ಬಾರಿ ಸರ್ಕಾರದ ಮಟ್ಟದಲ್ಲಿ ಸಭೆಗಳಿರುತ್ತವೆ ಅದಕ್ಕೆ ಮಾಹಿತಿ ನೀಡುವುದರೊಂದಿಗೆ ಸಭೆಗೆ ಹಾಜರಾಗಬೇಕು.

ಇದಕ್ಕೆ ಧ್ವನಿಗೂಡಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರು ಕುಲಸಚಿವರು ಹೇಳಿದ್ದು ನಿಜ, ಯಾರೋ ಮಾಡಿದ್ದ ತಪ್ಪಿಗೆ ನಾವು ಜವಾಬ್ದಾರರಾಗಬೇಕಾಗಿದೆ ಮಾತೆತ್ತಿದರೆ ಪೆನಾಲ್ಟಿ ಎನ್ನುತಿದ್ದಾರೆ ಎಂದು ಹೇಳಿದರು.

ಕುಲಸಚಿವರೂ ಕೂಡ ಹಿಂದೆ ಆಗಿರುವ ತಪ್ಪಿಗೆ ಕುಲಪತಿಗಳು ಮತ್ತು ಕುಲಸಚಿವರೇ ಶಿಕ್ಷೆ ಅನುಭವಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸಿಂಡಿಕೇಟ್ ಸದಸ್ಯರು ಸಲಹೆ ಸಹಕಾರ ನೀಡಬಹುದೇ ವಿನ: ಕುಲಪತಿಗಳು, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳೇ ಮುಂದಿನ ಜವಾಬ್ದಾರಿಯಾಗುತ್ತಾರೆ ಎಂದು ಉನ್ನತ ಶಿಕ್ಷಣ ಸಚಿವರ ಸಭೆಯಲ್ಲಿ ತಿಳಿಸಿದ್ದಾರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜಪ್ಪರವರು ಮಾತನಾಡಿ ಸರ್ಕಾರದ ವಿರುದ್ಧ ಮಾತನಾಡಲು ಆಗುವುದಿಲ್ಲ, 371ಜೆ ಬಡ್ತಿಯ ಕುರಿತು ಮೂರು ಬಾರಿ ಸಭೆ ಕರೆದು ಅದನ್ನು ಮುಂದೂಡಲಾಗಿದೆ. ಶ್ರೀ ಸಿದ್ದಲಿಂಗ ಪಾಟೀಲ್ ಪರೀಕ್ಷಾ ವಿಭಾಗ ಇವರು ತುಂಬಾ ನಿಷ್ಟಾವಂತ ನೌಕರರು ಅವರಿಗೆ ಪ್ರಮೋಷನ್ ಕೊಡಲೇ ಬೇಕಾಗಿತ್ತು ಆದರೆ ಆಗಿಲ್ಲ ಎಂದು ಹೇಳಿದರು ಶ್ರೀ ನಟೇಶ್‌ರವರು ಸಹ ಇದಕ್ಕೆ ಧ್ವನಿಗೂಡಿಸಿದರು. ನೌಕರರಿಗೆ ಯಾವಾಗ ಯಾವ ಸೌಲಭ್ಯಗಳು ಸಿಗಬೇಕೋ ಅವುಗಳನ್ನು ಆಯಾ ಕಾಲಕ್ಕೆ ನೀಡಬೇಕು ವಿಳಂಭ ಆಗಬಾರದು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ಬಿ. ರಮೇಶ್‌ಬಾಬುರವರು ಮಾತನಾಡಿ ನಿಯೋಜನೆ ಮಾಡಿರುವ ಪತ್ರದಲ್ಲಿ ನಮೂದಿಸಿರುವ "ಹಿಂಪಡೆದು" ಎಂಬ ಪದವನ್ನು ತೆಗೆಯಬೇಕು ಎಂದು ಹೇಳಿದರು.

ಪ್ರಾದೇಶಿಕ ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್‌ರವರು ಮಾತನಾಡಿ ಇದು ವಿಶ್ವವಿದ್ಯಾಲಯದ ಆಂತರಿಕ ನಿಯೋಜನೆ ಆದ್ದರಿಂದ ಯಾವುದೇ ಸಮಸ್ಯೆ ಇಲ್ಲ ನಂತರ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಳ್ಳಬಹುದು ಎಂದು ಹೇಳಿದರು. ಮಾನ್ಯ ಕುಲಪತಿಗಳು ಸಹ ಏನೇ ಮಾಡುವುದಿದ್ದರೂ ಅನುಮೋದನೆ ಪಡೆದು ನಂತರ ಕ್ರಮ ಕೈಗೊಳ್ಳಿ ಸಿಬ್ಬಂದಿಗಳಿಗೆ ಯಾವುದೇ ತೊಂದರೆಯಾಗಬಾರದು ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಮಾನವ ಸಂಪನ್ಮೂಲ ವಿಭಾಗದ ಸಿಬ್ಬಂದಿಗಳಿಂದ ಉನ್ನತೀಕರಣದ ಮೂಲಕ ಬಡ್ತಿ ಹೊಂದಿದ ನೌಕರರ ಪಟ್ಟಿ ಪಡೆದು ನಂತರ ಯಾವ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಿರ್ಣಯ: **ಚರ್ಚೆಯ ನಂತರ ಉನ್ನತೀಕರಣದ ಮೂಲಕ ಮುಂಬಡ್ತಿ ನೀಡಿರುವ ಕುರಿತು ಪರಿಶೀಲಿಸಲು ಸಿಬ್ಬಂದಿಗಳನ್ನು ನಿಯೋಜಿಸಿರುವ ಆದೇಶದಲ್ಲಿ ನಮೂದಾಗಿರುವ "ಹಿಂಬಡ್ತಿ' ಎಂಬ ಪದವನ್ನು ತೆಗೆಯಲು ಸಭೆಯು ನಿರ್ಣಯಿಸಿತು. ಹಾಗೂ ದಿನಾಂಕ:02-06-2022ರ ಸಿಂಡಿಕೇಟ್ ಸಭೆಯಲ್ಲಿ "ಸಿಬ್ಬಂದಿಗಳ ವೇತನವನ್ನು ತಡೆ**



Scanned with OKEN Scanner

ಹಿಡಿಯಬಾರದು" ಎಂದು ನಿರ್ಣಯವಾಗಿರುವುದರಿಂದ ಅದರಂತೆ ಸಿಬ್ಬಂದಿಗಳ ವೇತನ ಪಾವತಿ ಕುರಿತು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು. ಹಾಗೂ ಉನ್ನತೀಕರಣದ ಮೂಲಕ ಮುಂಬಡ್ತಿ ನೀಡಿರುವ ಹುದ್ದೆಗಳ ಕುರಿತು ಚರ್ಚೆಗಾಗಿ ಮುಂದಿನ ಸಭೆಗೆ ವಿಷಯ ಮಂಡಿಸಲು ನಿರ್ಣಯಿಸಲಾಯಿತು.

5 ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಅಧ್ಯಾಪಕರಿಗೆ ವೃತ್ತಿ ಪದೋನ್ನತಿ ಆದೇಶ ನೀಡಬೇಕು, ವಾಹನ ಚಾಲಕರುಗಳ ಪರಿನಿಯಮವನ್ನು ಸರ್ಕಾರಕ್ಕೆ ಕಳುಹಿಸಬೇಕು. ಡಾ. **ಶುಭಾ ಮರವಂತೆ,** ಡಾ. ನಾಗರಾಜ್ ಪರಿಸರ ಸಹ್ಯಾದ್ರಿ ಕಾಲೇಜು ಇವರಿಗೆ ವೃತ್ತಿಪದೋನ್ನತಿ ಸಭೆ ನಡೆಸಬೇಕು. ಪ್ರೊ. ರವೀಂದ್ರ ಗಡ್ಕರ್ ರವರಿಗೆ ನಿವೃತ್ತಿ ಸೌಲಭ್ಯ ನೀಡಬೇಕು ಎಂದು ಹೇಳಿದರು.

ಕುಲಸಚಿವರು ಮಾತನಾಡಿ ವೃತ್ತಿ ಪದೋನ್ನತಿಯ ಕುರಿತು ಕ್ರಮ ಕೈಗೊಳ್ಳಲಾಗಿದೆ, ಪ್ರೊ. ರವೀಂದ್ರ ಗಡ್ಕರ್ ರವರ ನಿವೃತ್ತಿ ಸೌಲಭ್ಯ ಕುರಿತು ದಿನಾಂಕ:16-12-2022ರಂದು ನಡೆಯಲಿರುವ ಪಿಂಚಣಿ ಅದಾಲತ್ ಸಭೆಯಲ್ಲಿ ಚರ್ಚಿಸಿ ಪರಿಹರಿಸಲಾಗುವುದು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ. ರವರು ಮಾತನಾಡಿ ಅಧ್ಯಾಪಕೇತರ ಸಿಬ್ಬಂದಿಗಳ ಡಿಮೋಷನ್ ಆದೇಶವನ್ನು ಹಿಂಪಡೆದು, ವಿಲೀನೀಕರಣಗೊಂಡ ನೌಕರರಿಗೆ ಸದರಿ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯಗಳಿಗೆ ಪರಿಗಣಿಸುವುದು ಒಳ್ಳೆಯದು ಎಂದು ಹೇಳಿದರು.

ನಿರ್ಣಯ ಕುಲಸಚಿವರು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

6 ಸದಸ್ಯರಾದ ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ದಯವಿಟ್ಟು ಎಫ್.ಪಿ.ಐ. ಯೋಜನೆಯನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಬೇಕು ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಬೇಡ, ರೂ.30-00 ಲಕ್ಷ ಆರಂಭಿಕ ಮೊತ್ತ ಸಂಸ್ಥೆಗೆ ನೀಡಬಹುದು ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡುವುದು ಬೇಡ ಅವರ ಸ್ವಂತ ಅಭಿಪ್ರಾಯಕ್ಕೆ ಬಿಡಬೇಕು ಇಚ್ಛೆ ಇರುವವರು ನೊಂದಣಿ ಮಾಡಿಸಿಕೊಳ್ಳುತ್ತಾರೆ, ಇದೇ ರೀತಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೂಡ ಆಗಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ರಾಜೀವ್ ಗಾಂಧಿ ಮೆಡಿಕಲ್ ಕಾಲೇಜು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇಲ್ಲಿ ಈಗಾಗಲೇ ಅಳವಡಿಸಲಾಗಿದೆ ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಅಳವಡಿಸಬಹುದು ಎಂದು ಹೇಳಿದರು. ಶ್ರೀ ಹೆಚ್.ಬಿ. ರಮೇಶ್ ಬಾಬುರವರು, ಶ್ರೀ ನಿರಂಜನಮೂರ್ತಿ ಹಾಗೂ ಶ್ರೀ ಸಂತೋಷ್ ಬಳ್ಳೇಕೆರೆಯವರು ಇದಕ್ಕೆ ಒತ್ತಾಯಿಸಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಿ, ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡದೇ ಐಚ್ಛಿಕವಾಗಿ ಸ್ವಂತ ಇಚ್ಛೆಗೆ ಬಿಡಲು ಕೋರಿದರು.

ಈ ವಿಷಯಕ್ಕೆ ಕುಲಸಚಿವರು ಹಾಗೂ ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಈ ವಿಷಯಕ್ಕೆ ತಮ್ಮ ಒಪ್ಪಿಗೆ ಇಲ್ಲ ಆದ್ದರಿಂದ ಡೀಸೆಂಟ್ ನೋಟ್ ಕೊಡುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕುಲಸಚಿವರು ಡೀಸೆಂಟ್ ನೋಟ್ ಕೊಡಲು ಬರುವುದಿಲ್ಲ ಎಂದು ಹೇಳಿದರು.

ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಕುಲಸಚಿವರು ಸದಸ್ಯ ಕಾರ್ಯದರ್ಶಿಯಾಗಿರುವುದರಿಂದ ಡೀಸೆಂಟ್ ನೋಟ್ ಕೊಡಬಹುದು ಎಂದು ಹೇಳಿದರು.

ನಿರ್ಣಯ: ಚರ್ಚೆಯ ನಂತರ ಎಫ್.ಪಿ.ಐ. ಯೋಜನೆಯನ್ನು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಲು ಹಾಗೂ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಅವರ ಸ್ವಂತ ಇಚ್ಛೆಗೆ ಬಿಡಲು ನಿರ್ಣಯಿಸಲಾಯಿತು. ಹಾಗೂ ಆರಂಭಿಕ ವೆಚ್ಚ ನೀಡುವ ಕುರಿತು ಸದರಿ ಸಂಸ್ಥೆಯೊಂದಿಗೆ ಚರ್ಚಿಸಿ ನಂತರ ತೀರ್ಮಾನ ಕೈಗೊಳ್ಳಲು ನಿರ್ಣಯಿಸಲಾಯಿತು. ಕುಲಸಚಿವರಾದ ಶ್ರೀಮತಿ ಅನುರಾಧ ಜಿ. ಮತ್ತು ಪ್ರೊ. ರಿಯಾಜ್ ಮಹಮೂದ್‌ರವರು ಈ ವಿಷಯದ ಕುರಿತು ತೆಗೆದುಕೊಂಡ ನಿರ್ಣಯಕ್ಕೆ ತಮ್ಮ ಸಮ್ಮತಿಯಿಲ್ಲ ಎಂದು ಮಾನ್ಯ ಕುಲಪತಿಗಳಿಗೆ ಡೀಸೆಂಟ್ ನೋಟ್ ನೀಡಿದರು.



Scanned with OKEN Scanner

ಕೊನೆಯಲ್ಲಿ ಡಿಸೆಂಬರ್ ಮಾಹೆಯಲ್ಲಿ ಸಿಂಡಿಕೇಟ್ ಸದಸ್ಯತ್ವದ ಅವಧಿ ಪೂರ್ಣಗೊಳ್ಳುವ ಎಲ್ಲ ಸದಸ್ಯರು ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ ಕುರಿತು ತಮ್ಮ ಅನುಭವಗಳನ್ನು ಸಭೆಯಲ್ಲಿ ಈ ಕೆಳಕಂಡಂತೆ ಹಂಚಿಕೊಂಡರು.

ಶ್ರೀ ಸಂತೋಷ್ ಬಳ್ಳೇಕೆರೆಯವರು ಮಾತನಾಡಿ ಪ್ರತಿಷ್ಠಿತ ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟ ರಾಜ್ಯ ಸರ್ಕಾರಕ್ಕೆ ಹಾಗೂ ಯಶಸ್ವಿಯಾಗಿ ಸೇವೆ ಸಲ್ಲಿಸಲು ಸಹಕರಿಸಿದ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು ಹಾಗೂ ನೌಕರ ವರ್ಗದವರಿಗೆ ತಮ್ಮ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ಧನಂಜಯ್ ಬಿ.ಜಿ .ರವರು ಮಾತನಾಡಿ ಇದೇ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ, ಸಂಯೋಜಿತ ಕಾಲೇಜಿನ ಪ್ರಾಂಶುಪಾಲರಾಗಿರುವ ನನಗೆ ಸಿಂಡಿಕೇಟ್ ಸದಸ್ಯನಾಗಿ ಹಲವು ಅನುಭವ ಆಗಿದೆ. ಸಭೆಯ ಅಜೆಂಡಾದ ಮೂಲಕವೇ ಹೇಗೆ ಚರ್ಚಿಸಬೇಕು ಎಂಬ ಬಗ್ಗೆ ಹಾಗೂ ಇತರೆ ವಿಷಯಗಳ ಕುರಿತು ಅರಿವು ಉಂಟಾಗಿದೆ.

ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಡಿಸೆಂಬರ್ 2019ರಿಂದ 2022ರವರೆಗೆ ಸಿಂಡಿಕೇಟ್ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ವಿಭಿನ್ನ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಗಳು ಒಂದು ಕಡೆ ಸೇರಿ ಕಾರ್ಯ ನಿರ್ವಹಿಸಿರುವುದು ವಿಭಿನ್ನವಾಗಿತ್ತು. ನಿರ್ಧಿಷ್ಟವಾದ ಕೆಲವು ಗುರಿಗಳನ್ನು ಇಟ್ಟುಕೊಂಡು ಬಂದಿದ್ದು ಅವುಗಳನ್ನು ಪೂರ್ಣವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗದೇ ಇದ್ದರೂ ಸಹ ಕೆಲಮಟ್ಟಿಗೆ ಕಾರ್ಯಗತಗೊಳಿಸಲಾಗಿದೆ. ನಾವೆಲ್ಲರೂ ವಿಶ್ವವಿದ್ಯಾಲಯದ ಒಳಿತಿಗಾಗಿ ಯೋಚಿಸುತಿದ್ದೆವು. ಸ್ವಾರ್ಥತೆ ಸ್ವಜನ ಪಕ್ಷಪಾತ ಇಲ್ಲದೇ ಇದ್ದಾಗ ಮಾತ್ರ ಅಭಿವೃದ್ಧಿಯ ಕುರಿತು ಯೋಚಿಸಲು ಸಾಧ್ಯ. ನಾವೆಲ್ಲರೂ ಮುಂದಿನ ಪೀಳಿಗೆಗೆ ಮಾದರಿಯಾಗಿ ಬದುಕಬೇಕು ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು.

ಶ್ರೀ ರಾಮಲಿಂಗಪ್ಪ ಹೆಚ್ ಇವರು ಮಾತನಾಡಿ ಮೊದಲಿಗೆ ತಮಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟ ರಾಜ್ಯ ಸರ್ಕಾರಕ್ಕೆ ಧನ್ಯವಾದ ತಿಳಿಸಿದರು.
ನಂತರ ಮಾತನಾಡಿ ನಾನು ಯಾವಾಗಲೂ ನೌಕರರ ಹಿತಾಸಕ್ತಿಗಾಗಿ ಧ್ವನಿಯೆತ್ತುತ್ತಾ ಇದ್ದೆ. ನೌಕರರ ಹಿತಾಸಕ್ತಿಗಾಗಿ ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಬರದಂತೆ ನೋಡಿಕೊಳ್ಳುವಂತೆ ಕೋರಿದರು.

ಶ್ರೀ ನಟೇಶ್‌ರವರು ಮಾತನಾಡಿ ಇದೇ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿ ಸಿಂಡಿಕೇಟ್ ಸಭೆಯ ಸದಸ್ಯನಾಗಿ ಕಾರ್ಯನಿರ್ವಹಿಸುವುದು ಹೆಮ್ಮೆಯ ವಿಷಯವಾಗಿದೆ. ನಾವು ಹೊರ ಹೋದರೂ ವಿಶ್ವವಿದ್ಯಾಲಯದ ಭಾಗವಾಗಿ ಮುಂದುವರೆಯುತ್ತೇವೆ ಎಂದು ಹೇಳಿದರು.

ಶ್ರೀಮತಿ ಭಾರತಿಯವರು ಮಾತನಾಡಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿರುವುದರಿಂದ ವಿವಿಧ ಅವಕಾಶಗಳು ಸಿಕ್ಕಿವೆ ಅದರಲ್ಲಿ ಸಿಂಡಿಕೇಟ್ ಸದಸ್ಯತ್ವವೂ ಒಂದು. ಮೊದಲು ಭಯ ಆಯ್ತು ನಂತರ ಸಭೆಗಳು ನಡೆಯುವುದೇ ಹೀಗೆ ಎಂಬ ಅರಿವಾಯಿತು. ನಮ್ಮ ಟೀಂ ಬಹಳ ಚೆನ್ನಾಗಿತ್ತು. ನಮ್ಮ ಸೇವೆಯನ್ನು ಮುಂದೂ ಬಳಸಿಕೊಳ್ಳಿ ಎಂದು ಹೇಳಿದರು.

ಶ್ರೀ ಬಿ.ಸಿ. ಬಸವರಾಜಪ್ಪರವರು ಮಾತನಾಡಿ ಈ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದು ಈಗ ಇಂತಹ ಮಹತ್ತರ ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿರುವುದು ಸಂತಸದ ವಿಷಯ, ನಾನು ಮಾತನಾಡುವಾಗ ಅಜಂಡಾದಲ್ಲಿನ ವಿಷಯದ ಕುರಿತು ಕಾನೂನಾತ್ಮಕವಾಗಿ ಅಧ್ಯಯನ ಮಾಡಿ ನೇರವಾಗಿ ಮಾತನಾಡುತ್ತೇನೆ ಎಂದು ಹೇಳಿದರು. ಹಾಗೂ ಎಲ್ಲರಿಗೂ ಧನ್ಯವಾದ ತಿಳಿಸಿದರು.

ಶ್ರೀ ಎಸ್.ಆರ್. ನಾಗರಾಜ್ ರವರು ಮಾತನಾಡಿ ನನ್ನನ್ನು ಸಿಂಡಿಕೇಟ್ ಸದಸ್ಯನಾಗಿ ನೇಮಿಸಿದ ರಾಜ್ಯ ಸರ್ಕಾರಕ್ಕೆ ಸಭೆಯ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು. ಸದಸ್ಯತ್ವದ ಅವಧಿಯಲ್ಲಿ ಸಾಕಷ್ಟು ಒಳ್ಳೆಯ ಕೆಲಸ ಮಾಡಿದ್ದೇವೆ. ವಿದ್ಯಾರ್ಥಿಗಳು ಹಾಗೂ ನೌಕರರ ಅನುಕೂಲಕ್ಕಾಗಿ ನಿರ್ಣಯ ತೆಗೆದುಕೊಂಡಿದ್ದೇವೆ. ಕೆಳದಿ ವಸ್ತು ಸಂಗ್ರಹಾಲಯದ ಕ್ಯುರೇಟರ್‌ರವರು ಸದ್ಯದಲ್ಲೇ ನಿವೃತ್ತರಾಗುತ್ತಿದ್ದಾರೆ.



Scanned with OKEN Scanner

ಅಲ್ಲಿಗೆ ಒಬ್ಬರನ್ನು ನೇಮಿಸಬೇಕು. ಸರ್ಟಿಫಿಕೇಟ್ ಕೋರ್ಸ್ ಪ್ರಾರಂಭಿಸಬೇಕು ಮುಂದಿನ ದಿನಗಳಲ್ಲಿ ಈ ಬಗ್ಗೆ ಗಮನ ವಹಿಸಿ ಜಾರಿಗೆ ತರಲು ಕೋರಿದರು. ನಂತರ ಎಲ್ಲರಿಗೂ ಧನ್ಯವಾದ ತಿಳಿಸಿದರು.

ಶ್ರೀ ಧರ್ಮಪ್ರಸಾದ್ ರವರು ಮಾತನಾಡಿ ನಾನು 2009ರಿಂದ 2012ರವರೆಗೆ ಸಿಂಡಿಕೇಟ್ ಸದಸ್ಯನಾಗಿ ಕಾರ್ಯನಿರ್ವಹಿಸಿದ್ದು ಈಗ ಎರಡನೇ ಅವಧಿಗೆ ಸಿಂಡಿಕೇಟ್ ಸದಸ್ಯನಾಗಿರುವುದು. ಈ ಅವಧಿಯಲ್ಲಿ ತುಂಬಾ ಐತಿಹಾಸಿಕ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಅತಿಥಿ ಉಪನ್ಯಾಸಕರ ವೇತನ ಹೆಚ್ಚಳ ಮಾಡಲಾಗಿದೆ. ಏಜೆನ್ಸಿ ನೌಕರರು/ ಅಧ್ಯಾಪಕರು/ ಅಧ್ಯಾಪಕೇತರ ನೌಕರರು/ ಅತಿಥಿ ಉಪನ್ಯಾಸಕರು ಹೀಗೆ ಎಲ್ಲ ವಿಷಯಗಳ ಕುರಿತು ಸಲಹೆ ಸಹಕಾರಗಳನ್ನು ಕೊಟ್ಟಿದ್ದೇವೆ. ಈ ಬಗ್ಗೆ ನಮಗೆ ಸಂತೋಷ ಇದೆ, ಎಲ್ಲರೂ ವಿಷಯಾಧಾರಿತವಾಗಿ ಮಾತನಾಡಿದ್ದೇವೆ. ನಮಗೆ ಸಹಕಾರ ನೀಡಿದ ತಮಗೆಲ್ಲರಿಗೂ ಧನ್ಯವಾದಗಳು ಎಂದು ಹೇಳಿದರು. ಹಾಗೂ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟ ರಾಜ್ಯ ಸರ್ಕಾರಕ್ಕೆ ಸಭೆಯ ಮೂಲಕ ಧನ್ಯವಾದ ತಿಳಿಸಿದರು.

ಅವಧಿ ಪೂರ್ಣಗೊಂಡಿರುವ ಸದಸ್ಯರುಗಳಿಗೆ ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಶುಭ ಹಾರೈಸಿದರು ವಿಶ್ವವಿದ್ಯಾಲಯಕ್ಕೆ ತಮ್ಮ ಮಾರ್ಗದರ್ಶನ ಯಾವಾಗಲೂ ಇರಲಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ನಾನು ಹಿಂದಿನ ಸಿಂಡಿಕೇಟ್ ಸಭೆಯಲ್ಲಿಯೇ ಹೇಳಿದ್ದೆ, ಮೈಸೂರಿನ ಜೆ.ಎಸ್.ಎಸ್. ಕಾಲೇಜಿನ ಒಬ್ಬರು ತಾಳೆಗರಿಗಳನ್ನು ಹಾಳಾಗದಂತೆ ತಡೆಯುವ ವಿಷಯದಲ್ಲಿ ಪರಿಣಿತಿ ಹೊಂದಿದ್ದಾರೆ ಅವರನ್ನು ಕರೆಸಿ ಕೆಳದಿಯ ವಸ್ತು ಸಂಗ್ರಹಾಲಯದಲ್ಲಿ ಲಭ್ಯವಿರುವ ಮ್ಯಾನ್ಯುಸ್ಕ್ರಿಪ್ಟ್‌ಗಳನ್ನು ಹಾಳಾಗದಂತೆ ತಡೆಯಲು ಕ್ರಮ ಕೈಗೊಳ್ಳುವುದು ಸೂಕ್ತ ಎಂದು ಹೇಳಿದರು. ಹಾಗೂ ಕೆಳದಿಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕ್ಯುರೇಟರ್‌ರವರು ಸದ್ಯದಲ್ಲೇ ನಿವೃತ್ತಿ ಹೊಂದುತ್ತಿರುವುದರಿಂದ ಕೂಡಲೇ ಕ್ಯುರೇಟರ್ ನೇಮಕಾತಿಗೆ ಕ್ರಮಕೈಗೊಳ್ಳಬೇಕು ಎಂದರು.

ಮುಂದುವರೆದು ಮಾತನಾಡಿದ ಶ್ರೀ ಎನ್.ಆರ್. ಮಂಜುನಾಥರವರು ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಕ್ಷರನ್ನು ಜೇಷ್ಠತೆಗನುಗುಣವಾಗಿ ಸರದಿಯನುಸಾರ ನೇಮಕಾತಿ ಮಾಡಬೇಕು ಎಂದು ಹೇಳಿದರು.

ಮಾನ್ಯಕುಲಪತಿಗಳು ಮಾತನಾಡಿ ಡಾ. ಶಿವಾನಂದ ಕೆಳಗಿನಮನಿಯವರು ಈ ಹಿಂದೆ ಎರಡು ವರ್ಷ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದಾರೆ ಈಗ ಮುಂದಿನವರಿಗೆ ಕೊಡಬೇಕು ಎಂದರು. ಆಗ ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಸರದಿಯ ಮೇಲೆ ಜೇಷ್ಠತೆಯನುಸಾರ ಮಾಡಿ ನಿಯಮದ ಅನುಸಾರವೇ ಮಾಡಿ ಎಂದರು. ಶ್ರೀ ರಮೇಶ್ ಬಾಬು ರವರು ಮಾತನಾಡಿ ಸರದಿಯ ಮೇಲೆ ಮಾಡಬೇಕು ಇಲ್ಲವಾದಲ್ಲಿ ಹಿಂದೆ ಮಾಡಿರುವುದೆಲ್ಲದರ ಮೇಲೆ ಪರಿಣಾಮ ಬೀರುತ್ತದೆ.

ಕುಲಸಚಿವರು ಮಾತನಾಡಿ ಜೇಷ್ಠತೆಯ ಮೇಲೆ ನೇಮಕ ಮಾಡಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಒಬ್ಬರು ಈಗಾಗಲೇ ಹಿಂದೆ ಎರಡು ವರ್ಷ ಮಾಡಿದ್ದಾರೆ, ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸದೇ ಇರುವವರು ಇದ್ದಾರಲ್ಲಾ ಅವರಿಗೆ ನೇಮಕ ಮಾಡೋಣ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಧರ್ಮಪ್ರಸಾದ್‌ರವರು ಹಾಗೂ ಶ್ರೀ ರಮೇಶ್‌ಬಾಬುರವರು ಬೇಡ ನಿಯಮಗಳನ್ವಯ ಜೇಷ್ಠತೆಯನುಸಾರವೇ ಮಾಡಿ ಎಂದು ಹೇಳಿದರು.

**ನಿರ್ಣಯ** ಚರ್ಚೆಯ ನಂತರ ಕುಲಸಚಿವರು ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಕ್ಷರನ್ನು ಜೇಷ್ಠತೆಗನುಗುಣವಾಗಿ ಸರದಿಯನುಸಾರ ನೇಮಕಾತಿ ಮಾಡಲಾಗುವುದು ಎಂದು ತಿಳಿಸಿದರು.

ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಸಂಚಿತ ವೇತನ ಎಂದು ಪರಿಗಣಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ ಸಂಚಿತ ವೇತನದಲ್ಲಿ ನೇಮಕ ಮಾಡಲು ಅವಕಾಶವಿರುವುದಿಲ್ಲ. ಅವರಿಗೆ ಈಗಾಗಲೇ ವೇತನದಲ್ಲಿ ತಲಾ 5000 ಸಾವಿರ ರೂಪಾಯಿಗಳನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು.



Scanned with OKEN Scanner

ಅವಧಿ ಪೂರ್ಣಗೊಂಡಿರುವ ಸದಸ್ಯರುಗಳಿಗೆ ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಶುಭ ಹಾರೈಸಿದರು ವಿಶ್ವವಿದ್ಯಾಲಯಕ್ಕೆ ತಮ್ಮ ಮಾರ್ಗದರ್ಶನ ಯಾವಾಗಲೂ ಇರಲಿ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕರ್ನಾಟಕದಲ್ಲಿ ಕುವೆಂಪು ವಿಶ್ವವಿದ್ಯಾಲಯವು ಜ್ಞಾನಾರ್ಜನೆಗೆ ಅತ್ಯುನ್ನತವಾದ ವಿಶ್ವವಿದ್ಯಾಲಯವಾಗಿದೆ. ಇಂತಹ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ತಾವೆಲ್ಲರೂ ವಿಶ್ವವಿದ್ಯಾಲಯದ ಏಳಿಗೆಗಾಗಿ ಕೊಡುಗೆಗಳನ್ನು ಕೊಟ್ಟಿದ್ದೀರಾ. ಪ್ರಸ್ತುತ ಉನ್ನತ ಶಿಕ್ಷಣದಲ್ಲಿ ದೊಡ್ಡ ಕ್ರಾಂತಿಯೇ ಉಂಟಾಗಿದೆ. ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿ ಸದಸ್ಯತ್ವದಿಂದ ನಿರ್ಗಮಿಸುತ್ತಿರುವ ಎಲ್ಲ ಸದಸ್ಯರಿಗೂ ಶುಭ ಹಾರೈಸಿ, ತಮಗೆಲ್ಲರಿಗೂ ಇನ್ನೂ ಹೊಸ ಹೊಸ ಅವಕಾಶಗಳು ಸಿಗಲಿ ಎಂದು ಹೇಳಿದರು.  ಮುಂದುವರೆದು ಡಾ. ಬಿ.ಆರ್. ಅಂಬೇಡ್ಕರ್ ಕಂಡಂತಹ ಕನಸು ನನಸಾಗಬೇಕು ವಿಶ್ವವಿದ್ಯಾಲಯವು ಇನ್ನೂ ಎತ್ತರಕ್ಕೆ ಏರಲಿ ಎಂದು ಹೇಳಿ ತಮ್ಮ ಮಾತನ್ನು ಮುಗಿಸಿದರು,

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

7/11/19

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–

ಕುಲಪತಿಗಳು



Scanned with OKEN Scanner